(ಶ್ರೀ ಜಿ. ರಾಮೇಗೌಡ)

ಇಲ್ಲಿರುವ ಚಿಲ್ಲಿಂಗ್ ಪ್ಲಾಂಟನ್ನು ಪರಿಶೀಲನೆ ಮಾಡಿ ನೋಡಿ ಅವರು ಕೊಟ್ಟಿರುವ ರಿಪೋರ್ಟಿನಲ್ಲಿ :

> "The Committee learnt that the supply of milk to the Chilling Plant is quite encouraging and the purchase of it was restricted as it was beyond the capacity of the Chilling Plant."

ಎಂದು ಹೇಳಿದ್ದಾರೆ. ಆದರೆ ರಿಪೋರ್ಟಿನಲ್ಲಿ ಹೇಳಿರುವುದಕ್ಕೂ ಇಲ್ಲಿ ತಾವು ಹೇಳುವುದಕ್ಕೂ ವ್ಯತ್ಯಾಸವಿದೆಯಲ್ಲಾ? ಇದಕ್ಕೆ ಕಾರಣವೇನು?

ಶ್ರೀ ಡಿ. ದೇವರಾಜ ಅರಸ್.—ಎಸ್ಟಿಮೇಟ್ ಕಮಿಟಿಯವರು ಬಂದು ಅವರು ರಿಪೋರ್ಟು ಕೊಟ್ಟಿರುವುದೂ ಸರಕಾರದ ಮುಂದೆ ಬಂದಿದೆ. ಆಗ ಅಲ್ಲಿ ಕಾಲು ಚೆನ್ನಾಗಿತ್ತು ಮತ್ತು ಆಗ ಹೆಚ್ಚು ಹಾಲು ಸಿಗುತ್ತಿತ್ತು. ಆದರೆ ಹೆಚ್ಚು ಹಾಲು ಸರಬರಾಜು ಒಂದೇ ಸಮನೆ ಆಗುವುದಿಲ್ಲ. ಇದಕ್ಕೆ ಸೀಸನರಿ ಕಂಡೀಷನ್ಸ್‌ಗಳೂ ಕಾರಣ. ಎಸ್ಟಿಮೇಟು ಕಮಿಟಿಯವರು ಬಂದಿದ್ದ ಕಾಲದಲ್ಲಲ್ಲ ಅಲ್ಲಿ ಹಾಲು ಹೆಚ್ಚು ಉತ್ಪಾದನೆಯಾಗುತ್ತಿತ್ತು. ಆದಾದ ಎರಡು ತಿಂಗಳಲ್ಲೇ ಅಲ್ಲಿ ಹಾಲು ದೊರಕುವುದು ಕಡಿಮೆಯಾಗಿದೆ. ಎಲ್ಲಿ ಚಿಲ್ಲಿಂಗ್ ಪ್ಲಾಂಟುಗಳು ಇವೆಯೋ ಅಲ್ಲಿ ಹೆಚ್ಚು ಹಾಲು ಪಡೆಯುವುದು ಅವಶ್ಯವಾಗಿದೆ. ಆದರೆ ಈಗ ಅಲ್ಲಿ ಹಾಲು ಬರುವುದು ಕಡಿಮೆಯಾಗಿದೆ.

ಶ್ರೀ ಜಿ. ರಾಮೇಗೌಡ.—ಬೆಂಗಳೂರಿನಲ್ಲಿ ಡೈರಿಗೆ ಈ ನಗರದ ಸುತ್ತಮುತ್ತ ಬರುವ ಹಾಲು ಸರಬರಾಜು ಕಡಿಮೆಯಾಗಿದೆ ಎಂದು ಹಿಂದೆ ಒಂದು ಸಾರಿ ಅಪ್ಪಣೆ ಕೊಡಿಸಿದ್ದಿರಿ. ಈಗ ದೊಡ್ಡ ಬಳ್ಳಾಪುರದ ತಾಲ್ಲೂಕಿಗೆ ಮಾತ್ರ ಇಂತಹ ರಿಸ್ಟ್ರಿಕ್ಷನ್ ಮಾಡುವುದು ಸರಿಯೇ?

ಶ್ರೀ ಡಿ. ದೇವರಾಜ ಅರಸ್.—ಇದು ಬಹಳ ಕಷ್ಟದ ವಿಚಾರ. ಹಾಲಿನ ಉತ್ಪಾದನೆಯ ಮೇಲೆ ಇದು ಅವಲಂಬಿಸುತ್ತದೆ. ಸರಿಯಾಗಿ ಹಾಲಿನ ಸಪ್ಲೈ ಸಿಗುತ್ತಿಲ್ಲ.

ಶ್ರೀ ಜಿ. ರಾಮೇಗೌಡ.—75 ಕಲೋಫಿಪಾಟರುಗಳಷ್ಟು ಹಾಲಿನ ರಾರಿ ವ್ಯಾನುಗಳನ್ನು ಓಡಿಸುವುದು ಅಷ್ಟು ಎಕನಾಮಿಕಲ್ ಅಲ್ಲ, ಮತ್ತು ಇದಕ್ಕೆ ಬದಲಾಗಿ ದೊಡ್ಡಬಳ್ಳಾಪುರದಲ್ಲೇ ಎಲ್ಲ ಹಾಲನ್ನೂ ಪಡೆಯುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ದೊಡ್ಡಬಳ್ಳಾಪುರದಲ್ಲಿ ಹಿಂದೆ ಹನ್ನೊಂದು ಸಾವಿರ ಲೀಟರುಗಳಷ್ಟು ಹಾಲು ಬರುತ್ತಿದ್ದುದು ಇಂದು ಎಂಟು ಸಾವಿರ ಲೀಟರುಗಳಷ್ಟು ಆಗಿ ಕಡಿಮೆಯಾಗಿದೆ ಮತ್ತು ಹೀಗೆ ಇನ್ನೂ ಕೆಲವು ಕಡೆಗಳಿಂದ ಬರುವ ಹಾಲಿನ ಸರಬರಾಜೂ ಕಡಿಮೆಯಾಗುತ್ತಿದೆ. ಮಾನ್ಯ ಸದಸ್ಯರೂ ಕೂಡ ಒಂದು ಸಾರಿ ನನ್ನಲ್ಲಿ ಬಂದು ಈಗ ಕಂಟ್ರಾಕ್ಟ್ ಪ್ರಕಾರ ಹಾಲು ಕೊಡುತ್ತಿರುವುದರಿಂದ ಅವರಿಗೆ ಪೂರ್ತಿಯಾಗಿ ಹಾಲು ಕೊಡುವುದು ಕಷ್ಟ. ಇವರಿಗೆ ಸ್ವಲ್ಪ ವಿನಾಯಿತಿ ಕೊಡಬೇಕು ಎಂದೂ ಸಲಹೆ ಮಾಡಿದ್ದಾರೆ. ಇದು ಬೇಸಿಗೆ ಕಾಲ. ಇದರಿಂದ ಹಾಲಿನ ಸಪ್ಲೈ ಕೂಡ ಕಡಿಮೆಯಾಗುತ್ತಿದೆ.

ಶ್ರೀ ಜಿ. ರಾಮೇಗೌಡ.—ದೊಡ್ಡಬಳ್ಳಾಪುರದಲ್ಲಿ ಹಾಲಿನ ಕ್ಯಪಾಸಿಟಿ ಕಡಿಮೆಯಾಗುತ್ತಿರುವುದರಿಂದ ಇಲ್ಲಿ ಹೆಚ್ಚು ಲಾರಿಗಳ ಓಡಾಟವಾಗುತ್ತಿರುವುದನ್ನು ನಿಲ್ಲಿಸುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಇದನ್ನು ಮಾಡುವುದು ಕಷ್ಟ. ಇದರ ಬಗ್ಗೆ ಯಾವ ಯಾವ ಕಾಲದಲ್ಲಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅಂತಹ ಕಾಲದಲ್ಲಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಬಹುದು. ಇದಕ್ಕಾಗಿ ಹೆಚ್ಚು ಹೆಚ್ಚು ಸೊಸೈಟಿಗಳನ್ನು ಮಾಡಲಿಕ್ಕೆ ಏರ್ಪಾಡು ಮಾಡುವುದು ಒಳ್ಳೆಯದು ಎಂದು ಇಲ್ಲಿ ಹೇಳುತ್ತಿದ್ದೇನೆ.

Nargudda as a Tourist Centre

430. Sri M. NAGAPPA (Raichur).—

Will be Minister for Information and Publicity, Transport and Tourism be pleased to state :—

(*a*) whether there is any scheme to declare the "Nargudda" the holy place in Raichur taluk as a tourist centre ;

(*b*) if so, the stage at which this scheme stands ;

(*c*) when it will be materialised ?

A.—Sri MOHAMED ALI (Minister for Information and Publicity, Transport and Tourism).—

(*a*) No.

(*b*) and (*c*) Do not arise in view of reply to clause (*a*) above.

ಶ್ರೀ ಎಂ. ನಾಗಪ್ಪ.—ನರಗುಂದ ಬಳಿ ಎರಡು ಮುಖ್ಯವಾದ ದೇವಸ್ಥಾನಗಳಿವೆ. ಒಂದು ದತ್ತಾತ್ರೇಯ ದೇವಸ್ಥಾನ ಮತ್ತೊಂದು ಚನ್ನಬಸವೇಶ್ವರ ಸ್ವಾಮಿ ದೇವಸ್ಥಾನ. ಇವು ಬಹಳ ಮುಖ್ಯವಾದ ಸ್ಥಳಗಳು ಮತ್ತು ಸುಂದರವಾದ ಪ್ರದೇಶಗಳು ಆಗಿವೆ. ಇದನ್ನು ಒಂದು ಉತ್ತಮವಾದ ಟೂರಿಸ್ಟ್ ಸೆಂಟರಾಗಿ ಮಾಡಲು ಏಕೆ ಕ್ರಮ ತೆಗೆದುಕೊಳ್ಳಬಾರದು ?

9-30 A.M.

Sri MOHAMED ALI.—This place is situated in the midst of the forest encircled by river Krishna and there are many important Temples also. Merely declaration of this place as a tourist centre will not serve any purpose, and there is no difficulty for me to declare it simply.

ಶ್ರೀ ಎಂ. ನಾಗಪ್ಪ.—ಮುಂದೆ ಆಂಧ್ರದವರ ಗುಂಡಾರ್ ಪ್ರಾಜೆಕ್ಟ್ ಅಂತ 10 ಮೈಲಿ ಮೇಲೆ ಕಟ್ಟತಕ್ಕ ಪರಿಸ್ಥಿತಿ ಅಲ್ಲಿ ಇದೆ. ಅದಕ್ಕೆ ಮುಂಚೆಯೇ ಇದನ್ನು ಟೂರಿಸ್ಟ್ ಸೆಂಟರ್ ಅಂತ. ಡೆವಲಪ್ ಮಾಡಿದರೆ ತಮ್ಮ ಕೇಸನ್ನು ಸಬ್‌ಸ್ಟಾನ್‌ಷಿಯೇಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಆದ್ದರಿಂದ ಆದಷ್ಟು ತೀವ್ರ ಇದನ್ನು ಟೂರಿಸ್ಟ್ ಸೆಂಟರ್‌ಆಗಿ ಮಾಡುವುದಕ್ಕೆ ಸಾಧ್ಯವಿದೆಯೇ ?

Sri MOHAMED ALI.—So far as Gundal Project is concerned it requires the concurrence of the Government of Mysore and I think, without the approval of Government of Mysore, this cannot be done.

ಶ್ರೀ ಎಂ. ನಾಗಪ್ಪ.—ಮೈಸೂರು ಗವರ್ನಮೆಂಟ್ ಅವರಿಗೆ ಅಧಿಕಾರವಿಲ್ಲ ಎಂದು ಹೇಳುವುದಿಲ್ಲ, ಇದು ತಮ್ಮ ಗ್ರೌಂಡ್‌ನ್ನು ಸಬ್‌ಸ್ಟಾನ್‌ಷಿಯೇಟ್ ಮಾಡಲಿಕ್ಕೆ ಅಲ್ಲಿ ಇಂತಹ ಒಂದು ಮುಖ್ಯವಾದಂತಹ ಟೆಂಪರ್ ಇದೆ, ಟೂರಿಸ್ಟ್ ಸೆಂಟರ್ ಆದರೆ ಅದು ಮುಖ್ಯವಾದಂತಹ ಸ್ಥಳ ಎಂದು ತಾವು ಅಬ್ಜಕ್ಷನ್ ಮಾಡಲಿಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಇದನ್ನು ತೀವ್ರವಾಗಿ ಟೂರಿಸ್ಟ್ ಸೆಂಟರ್ ಮಾಡಲಿಕ್ಕೆ ಸಾಧ್ಯವಿದೆಯೇ ಇಲ್ಲವೇ ?

Sri MOHAMED ALI.—Even otherwise the Government of Mysore has got very strong grounds to refuse approval for the Gundal Project.

ಶ್ರೀ ಎಸ್. ಎ. ಅಗ್ನಿಹೋತ್ರಿ.—ಧಾರವಾಡ ಜಿಲ್ಲೆಯಲ್ಲಿ ದೇವರಗುಡ್ಡ ಎಂಬ ಸ್ಥಳದಲ್ಲಿ ಮೈರಾರ ಲಿಂಗನ ದೇವಸ್ಥಾನ ಇದೆ ಅದನ್ನು ಟೂರಿಸ್ಟ್ ಸೆಂಟರ್ ಮಾಡಬೇಕೆಂದು ಇದುವರೆಗೆ ಎಷ್ಟೋ ಸಾರಿ ಕೇಳಿಕೊಂಡರೂ ಅದನ್ನು ಟೂರಿಸ್ಟ್ ಸೆಂಟರ್ ಆಗಿ ಮಾಡಲು ಕಾರ್ಯಕ್ರಮ ತೆಗೆದುಕೊಂಡಿಲ್ಲ, ಆದ್ದರಿಂದ ನಮ್ಮ ಸ್ನೇಹಿತರು ಹೇಳತಕ್ಕ ಸ್ಥಳವನ್ನು ಟೂರಿಸ್ಟ್ ಸೆಂಟರ್ ಮಾಡುವುದಕ್ಕಿಂತ ಮೊದಲು ಅದಕ್ಕೆ ಪ್ರಾಶಸ್ತ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri MOHAMED ALI.—There are many places of religious importance which have got some tourist importance locally. But it will not be possible for the Government of Mysore to take up all these places and provide facilities to the visiting tourists, unless more funds are available to the Department of Tourism.

ಶ್ರೀಮತಿ ನಾಗಮ್ಮ.—ಈ ನಾರಗುಡ್ಡವನ್ನು ಟೂರಿಸ್ಟ್ ಸೆಂಟರ್ ಆಗಿ ಯಾವಾಗ ಮಾಡಬಲ್ಲಿರಿ ? ಮತ್ತು ಇಷ್ಟರೊಳಗೆ ಆಗಬಹುದು ಎಂಬುದನ್ನು ಹೇಳುತ್ತೀರಾ ?

Sri MOHAMED ALI.—I have told just now that for want of funds, it will not be possible for the Government of Mysore to take up these places and provide facilities for the visiting tourists.

Intelligence Wing of Commercial Taxes Office

431. Sri H. SIDDAVEERAPPA (Harihar).—

Will the Minister for Finance, Planning, Commerce and Industries be pleased to state :—

(*a*) when the Intelligence Wing of Commercial Taxes was created at Davangere ;

(*b*) the purpose of this office and who is the incumbent;

(*c*) whether it has come to the notice of the Government that this Intelligence Office is under the influence of the President of the Regulated Market, Davangere, as he was housed for months free of rent in the Guest House maintained by the Davangere Regulated Market ;

(*d*) the number of cases detected by this official and in how many action is taken ;

(*e*) whether it bas come to the notice of the Government that actuated by political considerations only Merchants of a particular section are harassed and others are not even looked ?

A.— Sri RAMAKRISHNA HEGDE (Minister for Finance, Planning, Commerce and Industries).—

(*a*) 1st of April, 1965.

(*b*) The purpose creating this office is to detect evasion, prevent malpractices, investigate complaints regarding evasions of tax, collect information from Railway, Octroi, Income Tax and other sources, cross verification of the informatoin collected from the above sources and survey work. The present incumbent is Sri H. R. Venkata Rao (since 12-6-1967).

(*c*) No.

(*d*) Number of cases detected by the present officer and action taken is as given below :—

(1) No. of shops inspected	...	140
(2) Approximate turnover found suppressed	...	Rs. ten lakhs
(3) No. of new cases detected	...	Nine
(4) Compounding fee collected	...	Rs. 18,157

(*e*) There is no such complaint.